<u>ಹಿರಿಯ ದಿವಾಣಿ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಬನಹಟ್ಟಿ</u>

ಎಂವಿಸಿ. ಸಂ.49/2024
ಸಿಡಬ್ಲ್ಯೂ-1

| | | |
|---|---|---|
| ಹೆಸರು | : | ಮಹಮ್ಮದರಫೀ ಬಬಲೇಶ್ವರ |
| ತಂದೆಯ ಹೆಸರು | : | ಮಕ್ಬುಲಸಾಬ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಆಡಳಿತಾಧಿಕಾರಿ, ಕುಸಬಿ ಆಸ್ಪತ್ರೆ ಜಮಖಂಡಿ |
| ವಾಸಸ್ಥಳ | : | ಬಿಸನಾಳ |

ದಿನಾಂಕಃ 22-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ-</u>

ನಾನು ಕಳೆದ 9 ತಿಂಗಳಿನಿಂದ ಕುಸಬಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಜಮಖಂಡಿಯಲ್ಲಿ ಆಡಳಿತಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಮಾನ್ಯ ನ್ಯಾಯಾಲಯದಿಂದ ಸದರಿ ಆಸ್ಪತ್ರೆಗೆ ಮಧ್ಯಂತರ ಅರ್ಜಿ ಸಂ.3 ರ ಮೇಲೆ ನೋಟಿಸ ಕಳುಹಿಸಿದ್ದು, ಅದರಂತೆ ನಾನು ಆಸ್ಪತ್ರೆಯ ಪರವಾಗಿ ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ, ಎಂಎಲ್‌ಸಿ ರಜಿಸ್ಟರ ಮತ್ತು ಪೋಲಿಸರಿಗೆ ನೀಡಿದ ಮಾಹಿತಿಯ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ. ಅಧಿಕಾರ ಪತ್ರವನ್ನು ನಿಸಿ-1 ಎಂದು, ಎಂಎಲ್‌ಸಿ ಯನ್ನು ನಿಸಿ-2 ಎಂದು ಮತ್ತು ಪೋಲಿಸರಿಗೆ ಮಾಹಿತಿ ಒದಗಿಸಿದ ಪತ್ರವನ್ನು ನಿಸಿ-3 ಎಂದು ಗುರುತಿಸಲಾಂತು. ನಿಸಿ-2 ಮತ್ತು 3 ರ ಮೂಲ ಪ್ರತಿಗಳನ್ನು ಸಾಕ್ಷಿಗೆ ಹಿಂದುಗಿರಸಲಾಯಿತು.

<u>ಪಾಟೀ ಸವಾಲುಃ- ಎದುರುದಾರರ ಪರ ಶ್ರೀ ಎಂಎಂಕೆ ವಕೀಲರಿಂದ</u>

ಮೃತ ಶಾಂತಾ ಭೀಮಶಿ ತಳವಾರ ಇವರು ಅಪಘಾತದಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಗೆ ಬಂದಿರಲಿಲ್ಲ, ಆದ್ದರಿಂದ ನಾವು ಸಮೀಪದ ಪೋಲಿಸ ಠಾಣೆಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಸಿ-2 ರ ದಾಖಲೆಯನ್ನು ಈಗ ನಾವು ತಯಾರಿಸಿಕೊಂಡು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಎಂಎಲ್‌ಸಿ ರಜಿಸ್ಟರನಲ್ಲಿ ವೈದ್ಯರ ಸಹಿ ಇರುವುದಿಲ್ಲ ಎಂದರೆ ಸರಿ. ದಿನಾಂಕಃ 29-05-2023 ರ ನಂತರ ನಾವು ಇತರ ಯಾವುದೇ ಎಂಎಲ್‌ಸಿ ವರದಿಯ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಹೊಸ ರಜಿಸ್ಟರ ಮಾಡಿರುವುದಾಗಿ ಹೇಳುತ್ತಾರೆ. ಯಾವುದೇ ವ್ಯಕ್ತಿ ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆಗೆ ಬಂದಾಗ ವೈದ್ಯರು ಆ ಬಗ್ಗೆ ತಮ್ಮ ರಜಿಸ್ಟರನಲ್ಲಿ ನಮೂದು ಮಾಡಿ ಅದಕ್ಕೆ ಸಹಿ ಹಾಕಬೇಕಾಗುತ್ತದೆ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿ, ಅಪಘಾತದಿಂದ ಶಾಂತಾ ಮೃತಪಟ್ಟಿಲ್ಲ, ಆದರೂ ಅವರ ವಾರಸುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ದಾಖಲೆಗಳನ್ನು ತಯಾರಿಸಿಕೊಂಡು ಹಾಜರಪಡಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.09.24 16:04:29 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ